# ECHO OF HIS CALL

# ಕರೆಯ ಪ್ರತಿಧ್ವನಿ

KANNADA

ECHO OF HIS CALL 1969-2019 GOLDEN JUBILEE

REACHING NATIONS

*India's National Spiritual Newspaper*

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

**Editor : S. SAM SELVA RAJ** | **16 Languages** | **Associate Editor : Rev. R. Rama Krishna**

**Vol. XXVI** | **FEBRUARY 2024** | **No. 01**


## ಪರಿಶುದ್ಧ ಸತ್ಯವೇದ

ದಯವಿಟ್ಟು ಈ ಕೆಳಗಿನ ವಚನಗಳನ್ನು ಕಂಠಪಾಠ ಮಾಡಿರಿ.

ಕೀರ್ತನೆ 112:1-10

1. ಯೆಹೋವನ ಸ್ತೋತ್ರ! ಯಾವನು ಯೆಹೋವನಲ್ಲಿ ಭಯಭಕ್ತಿಯುಳ್ಳವನಾಗಿ ಆತನ ಆಜ್ಞೆಗಳಲ್ಲಿ ಅತ್ಯಾನಂದ ಪಡುತ್ತಾನೋ ಅವನೇ ಧನ್ಯನು.
2. ಅವನ ಸಂತಾನವು ಲೋಕದಲ್ಲಿ ಬಲಿಷ್ಠವಾಗುವುದು; ನೀತಿವಂತನ ವಂಶವು ಶುಭ ಹೊಂದುವುದು.
3. ಅವನ ಮನೆಯಲ್ಲಿ ಧನೈಶ್ವರ್ಯಗಳಿರುವವು; ಅವನ ನೀತಿಯು ಸದಾಕಾಲವೂ ಫಲಿಸುತ್ತಿರುವುದು.
4. ಯಥಾರ್ಥರಿಗೆ ಕತ್ತಲೆಯಲ್ಲಿಯೂ ಜ್ಯೋತಿ ಮೂಡುವುದು; ದಯೆಯೂ ಕನಿಕರವೂ ನೀತಿಯೂ ಉಳ್ಳ ದೇವರೇ ಆ ಜ್ಯೋತಿ.
5. ದಯಾಳುವಾಗಿ ಧನಸಹಾಯ ಮಾಡುವವನೂ ತನ್ನ ಕಾರ್ಯಗಳನ್ನು ನೀತಿಯಿಂದ ನಡೆಸುವವನೂ ಭಾಗ್ಯವಂತನು.
6. ಅವನು ಎಂದೂ ಕದಡುದಿಲ್ಲ; ನೀತಿವಂತನನ್ನು ಯಾವಾಗಲೂ ನೆನಪಿಸುವರು.
7. ಅವನಿಗೆ ಕೆಟ್ಟ ಸುದ್ದಿಯ ಭಯವಿರುವುದಿಲ್ಲ; ಯೆಹೋವನಲ್ಲಿ ಭರವಸೆ ಇಟ್ಟಿರುವುದರಿಂದ ಅವನ ಮನಸ್ಸು ಸ್ಥಿರವಾಗಿರುವುದು.
8. ದುಷ್ಟರಿಗಾಗುವ ಶಿಕ್ಷೆಯನ್ನು ಕಣ್ಣಾರೆ ಕಾಣುವೆನೆಂಬ ಭರವಸೆ ಇರುವುದರಿಂದ ಅವನ ಮನಸ್ಸು ದೃಢವಾಗಿದೆ, ಹೆದರುವುದಿಲ್ಲ.
9. ಬಡವರಿಗೆ ಉದಾರವಾಗಿ ಕೊಡುತ್ತಾನೆ; ಅವನ ನೀತಿಯ ಫಲವು ಸದಾಕಾಲವೂ ಇರುವುದು, ಮಹಿಮೆಯೊಡನೆ ಅವನ ಕೊಂಬು ಎತ್ತಲ್ಪಡುವುದು.
10. ದುಷ್ಟನು ನೋಡಿ ವ್ಯಥೆಪಡುವನು; ಅವನು ಹಲ್ಲು ಕಡಿಯುತ್ತಾ ಲಯ ಹೊಂದುವನು. ದುಷ್ಟರ ನಿರೀಕ್ಷೆಯು ಭಂಗವಾಗುವುದು.

## GOD'S HAND IS UPON YOU FOR GOOD!

## ನಿಮ್ಮ ಒಳ್ಳೆಯದಕ್ಕಾಗಿ ದೇವರ ಕೃಪಾಹಸ್ತವು ನಿಮ್ಮ ಮೇಲೆ ಇದೆ !

*ಮುಖ್ಯ ಸಂಪಾದಕರು ಘನ. ಎಂಜೆಲಿನ್ ಸೆಲ್ವಕುಮಾರಿ*

**ಯೆಹೋವನು ಹೀಗನ್ನುತ್ತಾನೆ. ಯೆರಮೀಯ 2:18**



ದೇವರ ಕೃಪಾಹಸ್ತದ ಪರಿಕಲ್ಪನೆಯು ಕುತೂಹಲಕಾರಿಯಾಗಿದೆ. ಕಿಂಗ್ ಜೇಮ್ಸ್ ವರ್ಷನ್ ಸತ್ಯವೇದವು, ಕರ್ತನ ಕೃಪಾಹಸ್ತವು ಎಂಬ ಪದವು 39 ಸಾರಿ ಕಾಣಿಸುತ್ತದೆ. ಹಳೆಯ ಒಡಂಬಡಿಕೆಯಲ್ಲಿ 36 ಸಾರಿ ಮತ್ತು ಹೊಸ ಒಡಂಬಡಿಕೆಯಲ್ಲಿ 3 ಸಾರಿ ಕಾಣಿಸುತ್ತದೆ. ಇದರ ಜೊತೆಗೆ ದೇವರ ಹಸ್ತವು ಎಂಬ ಪದವು ಸತ್ಯವೇದದಲ್ಲಿ 16 ಸಾರಿ ಇದೆ. ಹಳೆಯ ಒಡಂಬಡಿಕೆಯಲ್ಲಿ 7 ಸಾರಿ, ಹೊಸ ಒಡಂಬಡಿಕೆಯಲ್ಲಿ 9 ಸಾರಿ ಇದೆ.

ಕೇವಲ ಹಳೆಒಡಂಬಡಿಕೆಯಲ್ಲಿ ಮಾತ್ರವಲ್ಲದೆ ಈ ಹೊತ್ತು ಕೂಡ ದೇವರ ಹಸ್ತವು ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ. ಯಾಕೆ ನಮ್ಮ ಜೀವಿತದಲ್ಲಿ ದೇವರ ಕೃಪಾಹಸ್ತವು ಬಹಳ ಪ್ರಾಮುಖ್ಯವಾಗಿದೆ.

(3ನೇ ಪುಟಕ್ಕೆ)




**Echo of His Call**

*Christian YouTube Channel!*

**An opportunity to pray with Pr. S. Sam Selva Raj!**


Message & Prayer in 5 minutes!!

**English, Hindi, Tamil & Telugu**

Every day – From 2.00 A.M.

**Tamil Sunday Service – 8.30 A.M.**

# ECHO OF HIS CALL - (1969-2019 GOLDEN JUBILEE YEAR)



## from your dearly beloved brother...

ECHO OF HIS CALL 1969-2019
REACHING NATIONS



**ನಾನು ಹಿಂದಿರುಗಲು ಆಹಾ, ತೊರೆಯ ಎರಡು ದಡಗಳಲ್ಲಿಯೂ ಅನೇಕಾನೇಕ ವೃಕ್ಷಗಳು ಕಾಣಿಸಿದವು (ಯೆಹಜ್ಕೇಲ 47:7)**

ಕ್ರಿಸ್ತಯೇಸುವಿನಲ್ಲಿ ನನ್ನ ಸ್ನೇಹಿತರೇ,

ನಮ್ಮ ರಕ್ಷಕನಾದ ಕ್ರಿಸ್ತಯೇಸುವಿನ ಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ಶುಭಾಶಯಗಳು!

ನಿಮ್ಮ ಅಚಲವಾದ ಪ್ರಾರ್ಥನೆಗಳು ಮತ್ತು ಆತನ ಕರೆಯ ಪ್ರತಿಧ್ವನಿಯ ವೈವಿಧ್ಯಮಯ ಚಟುವಟಿಕೆಗಳಿಗೆ ಬೆಂಬಲಕ್ಕಾಗಿ ನಾವು ನಿಮಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ಇತ್ತೀಚಿನ ಹಬ್ಬದ ಋತುವಿನ ಬೆಳಕಿನಲ್ಲಿ- (ಕ್ರಿಸ್ತಜಯಂತಿ, ಹೊಸವರ್ಷ ಮತ್ತು ವಾರ್ಷಿಕ ಭಾನುವಾರ ಶಾಲೆಯ ಕಾರ್ಯಕ್ರಮಗಳು) ಸಂತೋಷಪುರಂದ ಸುತ್ತಮುತ್ತ ಪ್ರದೇಶಗಳಲ್ಲಿ ಹೊರಗಡೆ ಸುವಾರ್ತೆ ಕೂಟಗಳನ್ನು ನಾವು ಆಯೋಜಿಸಿದ್ದೆವು. ಬಾಲಾಜಿ, ವೆಲಿಚರಿ ಮತ್ತು ಇನ್ನಿತರ ಕಡೆಗಳಲ್ಲಿ. ಈ ಪ್ರತಿಕ್ರಿಯೆಯು ನಿಜವಾಗಿಯೂ ಸ್ಫೂರ್ತಿದಾಯಕವಾಗಿತ್ತು.



***St. Paul's Matriculation School Teachers***

ಯಾಕೆಂದರೆ ದೇವರ ಉಪಸ್ಥಿತಿಯು ಜನರ ಹೃದಯವನ್ನು ಮುಟ್ಟಿತು. ಹೊಸವರ್ಷದಲ್ಲಿ ಕಾರ್ಯಕ್ರಮಗಳಿಗಾಗಿ ನಿರಂತರವಾಗಿ ಪ್ರಾರ್ಥನೆ ಮಾಡಬೇಕೆಂದು ನಾವು ನಿಮ್ಮಲ್ಲಿ ನಮ್ರತೆಯಿಂದ ಬೇಡಿಕೊಳ್ಳುತ್ತೇವೆ.

ನಮ್ಮ ನೆಹಮೀಯ ಸತ್ಯವೇದ ಕಾಲೇಜಿಗೆ **ಏಷ್ಯಾ ಥಿಯಲಾಜಿಕಲ್ ಆಸೋಸಿಯೇಷನ್**ನಿಂದ ಮಾನ್ಯತೆ ಪಡೆಯುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ ಎಂದು ನಿಮಗೆ ತಿಳಿಸಲು ನಾವು ಸಂತೋಷಪಡುತ್ತೇವೆ.



***Senior Pastor's Field Ministry in villages***

## OUR MISSION POLICY

We should expound and teach the contemporary generation the undiluted teachings of the ancient and early Apostles. It is the need of the hour.


**HON. EDITOR-IN-CHIEF**
Rev. Angeline S. Kumari, M.A., M.Sc., M.Ed.

**MANAGING EDITOR**
Pastor Alex Samson Sam, B.Th., M.Div.

**GENERAL MANAGER**
Bro. N. Prakasam, M.A., M.Sc.(C&P), PGDHRM, MBA.

**ADMINISTRATION**
Sis. Jesy Veena Sam
Adv. K. Puratchivendan, M.Com., C.A., B.L.
Dr. P.E.R. Premchand, M.Sc., M.A., M.Ed., Ph.D.
Dr. C.G.S. Baburao, B.Tech., M.Tech. (DM), Ph.D.
Dr. Rabinder Boaz, M.S. (CMC)


**EDITORIAL BOARD**
Dr. Serena Bevin, M.A., M.Phil., B.Ed.
Sis. Sajini Cherian
Sis. L. Mariya Anjalin, M.A., M.Sc., B.Ed.
Rev. Dr. K.R. Rajasekaran

**EDITOR, PUBLISHER & PRINTER**
Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 98412 71858 95661 31858

**E.MAIL ID**
sam@echoofhiscall.org
biblecor@yahoo.co.in

**WEBSITES**
www.echoofhiscall.org
www.stpaulsmatriculation.com

**YOUTUBE CHANNEL**
Echo of His Call



*Pastor Sam with Team working for Accreditation from ATA*

ಈ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ನಿಮ್ಮ ಪ್ರಾರ್ಥನೆಗಳು ಬಹಳವಾಗಿ ಮೆಚ್ಚುಗೆ ಪಡೆದಿವೆ. ಇದರ ಜೊತೆಗೆ ನಮ್ಮ **ನೆಹೆಮೀಯ ಸತ್ಯವೇದ ಕಾಲೇಜಿನ** ಗ್ರಂಥಾಲಯಕ್ಕೆ ಹಿಂದಿ ದೈವಶಾಸ್ತ್ರ ಪುಸ್ತಕಗಳು ಬೇಕಾಗಿವೆ. ನೀವು ಅಂತಹ ಸಂಪೂರ್ನ್ಮೂಲಗಳಿಗೆ ಪ್ರವೇಶವನ್ನು ಹೊಂದಿದ್ದರೆ, ಈ ವಿಷಯಕ್ಕಾಗಿ ಸಹಕರಿಸಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇವೆ.

ಕಳೆದ ವರ್ಷವನ್ನು ನಾವು ಹಿಂದಿರುಗಿ ನೋಡುವಾಗ, ನಮ್ಮ ಕೆಲವು ಸಹ ಕೆಲಸಗಾರರು ಆರೋಗ್ಯದ ಸವಾಲುಗಳನ್ನು ಎದುರಿಸಿದರು. ಪ್ರಾರ್ಥನೆಯ ಶಕ್ತಿಯ ಮೂಲಕ ದೇವರ ಕೃಪೆಯಿಂದ ಅವರನ್ನು ಸ್ವಸ್ಥ ಮಾಡಿದನು. ಇನ್ನೂ ಕೆಲವರಿಗೆ ನಿಮ್ಮ ನಿರಂತರ ಪ್ರಾರ್ಥನೆಯ ಸಹಾಯವು ಅವಶ್ಯವಾಗಿದೆ.

ನಾವು ಹೀಗೆ ಮುಂದೆ ಹೋಗುವಾಗ, ನಾವು ಮಾಡುವಂತಹ ಕೆಲಸಕ್ಕಾಗಿ ಬಹಳ ಆಸಕ್ತಿಯಿಂದ ನಿಮ್ಮ ನಿರಂತರವಾದ ಪ್ರಾರ್ಥನೆಯ ಸಹಾಯವನ್ನು ಎದುರು ನೋಡುತ್ತೇವೆ. ನಾವು ನಿಮಗಾಗಿ ಪ್ರಾರ್ಥನೆ ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ನಿಮಗೆ ಕೊಡುತ್ತೇವೆ.

**ಕ್ರಿಸ್ತ ಯೇಸುವಿನಲ್ಲಿ ನಿಮ್ಮ ಸೇವಕರುಗಳು,**

**ಅಲೆಕ್ಸ್ ಸ್ಯಾಮುಸನ್ ಸ್ಯಾಮ್**
**ಪಾ. ಎಸ್. ಸ್ಯಾಮ್ ಸೆಲ್ವರಾಜ್ ಮತ್ತು**
(+91) 98412 71858 / 98410 71858,
E.mail : sam@echoofhiscall.org

*(1ನೇ ಪುಟದಿಂದ)*

- ಅಪೋಸ್ತಲರ ಕೃತ್ಯಗಳು 7:50 ಈ ರೀತಿಯಾಗಿ ಉಲ್ಲೇಖಿಸಲ್ಪಟ್ಟಿದೆ ಆತನು ಸಮಸ್ತವನ್ನು **ತನ್ನ ಕೈಯಿಂದ** ನಿರ್ಮಿಸಿದನು.
- ಯಾಬೇಚನು ತನ್ನ ಮಹತ್ವವನ್ನು ಅರಿತು ಕೊಂಡಿದ್ದನು. ಅದಕ್ಕಾಗಿ ಈ ರೀತಿಯಾಗಿ ಹೇಳಿದನು. ನಿನ್ನ ಹಸ್ತವು ನನ್ನ ಮೇಲೆ ಇದೆ. ನಮ್ಮ ಎಲ್ಲಾ ಚಟುವಟಿಕೆಗಳಲ್ಲಿ ಮತ್ತು ನಮ್ಮ ಜೀವಿತದ ಎಲ್ಲಾ ಸನ್ನಿವೇಶದಲ್ಲಿ ದೇವರ ಕೃಪಾಹಸ್ತವು ಇದ್ದರೆ ಅದು ಅದ್ಭುತವಾದ ವ್ಯತ್ಯಾಸವಾಗುತ್ತದೆ. ನಮ್ಮಲ್ಲಿ ಎಷ್ಟು ಜನರು ಇದನ್ನು ಹೇಳಲಿಕ್ಕೆ ಸಾಧ್ಯ?
- **ನನ್ನ ಆಯುಷ್ಕಾಲವು ನಿನ್ನ ಕೈಯಲ್ಲಿದೆ.** ಕೀರ್ತನೆ 31:15
- ನಾವು ನಿನ್ನ **ಕೈಕೆಲಸವಾಗಿದ್ದೇವೆ.** ಕೀರ್ತನೆ 138:8
- **ನಮ್ಮ ಪ್ರಾಣವೂ ಆತನ ಕೈಯಲ್ಲಿದೆ.** ದಾನಿಯೇಲ್ 5:23
- ಆಕಾಶವು ದೇವರ ಪ್ರಭಾವವನ್ನು ಪ್ರಚುರ ಪಡಿಸುತ್ತದೆ. ಗಗನವು **ಆತನ ಕೈಕೆಲಸವನ್ನು** ತಿಳಿಸುತ್ತದೆ. ಕೀರ್ತನೆ 19:1
- ನೀನು ನಾನು ನಮ್ಮ ಕೈಗಳನ್ನು ಜೋಡಿಸುವಾಗ, ನನ್ನ ಕೈಯನ್ನು ದೇವರ ಕೈಯಲ್ಲಿ ಒಪ್ಪಿಸುವಾಗ, ಆತನು ನಮ್ಮ ಜೀವಿತವನ್ನು ಅದ್ಭುತವಾಗಿ ವ್ಯತ್ಯಾಸ ಮಾಡುವನು.

ದೇವರ ಕೈಯಿಂದ ಮಾಡಬಹುದಾದ ಕೆಲವು ವಿಷಯಗಳ ಕುರಿತು ನಾವು ಆಲೋಚಿಸೋಣ.

## 1. ಸೃಷ್ಟಿಸುವ ಕೈಗಳು!

ದೇವರ ಕೈಗಳು ಸೃಷ್ಟಿಸುವ ಕೈಗಳು ಆಗಿವೆ. ಆತನು ಅಸ್ತಿತ್ವದಲ್ಲಿಲ್ಲದ ವಸ್ತುಗಳನ್ನು ಸೃಷ್ಟಿಸುತ್ತಾನೆ. **ಇಲ್ಲದ್ದನ್ನು ಇರುವುದಾಗಿ ಕರೆಯುವವನು ಆಗಿದ್ದಾನೆ** (ರೋಮ 4: 17). ಆತನ ಕೈಗಳು ಹೊಸ ವಸ್ತುಗಳನ್ನು ಸೃಷ್ಟಿಮಾಡುತ್ತದೆ. ಆತನು ಸೃಷ್ಟಿಕರ್ತನು ಆಗಿದ್ದಾನೆ. ಅದು ಮಾತ್ರವಲ್ಲದೆ, ಆತನ ಕೈಗಳು ಸತ್ತುಹೋಗಿದ್ದ ವಸ್ತುಗಳನ್ನು ಜೀವಂತ ಮಾಡುತ್ತದೆ. ಸತ್ತುಹೋಗಿದ್ದ ವಸ್ತುಗಳನ್ನು ಆತನ ಕೈಗಳು ಮುಟ್ಟಿದಾಗ ಜೀವವಿಲ್ಲದ ಅಥವಾ ಅದಕ್ಕೆ ಯಾವುದೇ ಭವಿಷ್ಯವಿಲ್ಲದ ಆತನ ಕೈಗಳು ಜೀವಕ್ಕೆ ತರಬಹುದು. ಅವುಗಳನ್ನು ಉಜ್ಜೀವನಗೊಳಿಸಿ, ಬೆಳೆಯುವಂತೆ ಮಾಡುತ್ತಾನೆ. ಇದು ದೇವರ ಕೈಗಳ ಶಕ್ತಿಯಾಗಿದೆ. ವಿಧವೆಯ ಮಗನನ್ನು ಆತನ ಕೈಗಳು ಮುಟ್ಟಿದಾಗ ಅವನು ಬದುಕಿದನು. ಕೇವಲ ಆಕೆಯ ಮಗನನ್ನು ಬದುಕಿಸಿದ್ದಲ್ಲದೆ ಆಕೆಯ ಸತ್ತ ಜೀವನದ ಸನ್ನಿವೇಶವನ್ನು ಪುನಃ ಸ್ಥಾಪಿಸಿದನು. ಆಕೆಯ ನಿರೀಕ್ಷೆ, ಸಂತೋಷ ಮತ್ತು ನಂಬಿಕೆಯನ್ನು ಮರುಸ್ಥಾಪಿಸಿದನು.

ಆತನ ಸ್ಪರ್ಶವು ಆಕೆಯ ಜೀವನಕ್ಕೆ ಹೊಸ ಉದ್ದೇಶವನ್ನು ನೀಡಿದ್ದರಿಂದ ಆಕೆಯ ಅಸ್ತಿತ್ವವು ಹೊಸ ಅರ್ಥವನ್ನು ಪಡೆದುಕೊಂಡಿತು. ಆತನು ಅಲ್ಲಿಗೆ ಹೋಗಿ **ಚಟ್ಟವನ್ನು ಮುಟ್ಟಿದನು.** ಹೊತ್ತುಕೊಂಡು ಹೋಗುವವರು ನಿಂತಲ್ಲೇ ನಿಂತರು. ಸತ್ತುಹೋದ ಮನುಷ್ಯನನ್ನು ನೋಡಿ ಹೀಗೆ ಸಂಬೋಧಿಸಿದನು **-'ಯೌವ್ವನಸ್ಥನೇ, ಏಳು ಎಂದು ನಿನಗೆ ಹೇಳುತ್ತೇನೆ' ಅಂದನು. ಅನ್ನುತ್ತಲೇ ಸತ್ತಿದ್ದವನು ಎದ್ದು ಕೂತುಕೊಂಡು ಮಾತಾಡುವುದಕ್ಕೆ ತೊಡಗಿದನು. ಯೇಸು ಅವನನ್ನು ಅವನ ತಾಯಿಗೆ ಕೊಟ್ಟನು.** (ಲೂಕ 7:14,15).

ನಾವು ಇನ್ನೂ ಈ ವರ್ಷದ ಆರಂಭಿಕ ಹಂತದಲ್ಲಿ ಇದ್ದೇವೆ. ಮುಂಬರುವ ಸವಾಲುಗಳ ಬಗ್ಗೆ ಅನಿಶ್ಚಿತತೆಯನ್ನು ಅನುಭವಿಸುವುದು ಸಹಜ. ನೀವು ಈಗ ಕೊನೆಯ ಸತ್ತ ಅನುಭವವನ್ನು ಎದುರಿಸುತ್ತಿರ ಬಹುದು. ಹೊರಗಡೆ ಹೋಗವುದಕ್ಕೆ ದಾರಿ ಇದೆಯೋ ಇಲ್ಲವೋ ಎಂದು ಗೊಂದಲದಲ್ಲಿರ ಬಹುದು ಅಥವಾ ಮುಂದೆ ಏನು ಮಾಡಬೇಕು? ಇದು ಕೇವಲ ಒಂದೇ ಒಂದು ತಿಂಗಳು ಆಗಿದೆ. ಪ್ರಸ್ತುತ ಸಂಗತಿಗಳು ಬರುವಂತಹ ವರ್ಷವು ನಿಮಗೆ ಕಾಳಜಿಯನ್ನು ತರುತ್ತಿರಬಹುದು. ಇದನ್ನು ನಾನು ಹೇಗೆ ನಿಭಾಯಿಸಬಲ್ಲೆ?

ಪ್ರೀತಿಯ ಸ್ನೇಹಿತರೇ, ನಿಮ್ಮ ಜೀವಿತದ ಸತ್ತಂತಹ ಪ್ರದೇಶದಲ್ಲಿ ದೇವರ ಶ್ವಾಸವನ್ನು ಅನುವು ಮಾಡುವುದು ಬಹಳ ಪ್ರಾಮುಖ್ಯವಾಗಿದೆ. ಅವುಗಳು ಗೊಡ್ಡು ಮತ್ತು ಫಲರಹಿತವಾಗಿವೆ ಎಂದು ಒಪ್ಪಿಕೊಳ್ಳುವುದಾಗಿದೆ. ಅವುಗಳನ್ನು ಉಜ್ಜೀವನ ಗೊಳಿಸುವುದಕ್ಕೆ ದೇವರಿಗೆ ಅಪ್ಪಣೆ ಕೊಡುವುದು. ಈ ಒಂದು ಬೆಳವಣಿಗೆಯು ಸ್ವ-ಪರೀಕ್ಷೆ ಮತ್ತು ಒಪ್ಪಿಕೊಳ್ಳುವುದರಲ್ಲಿ ಒಳಗೊಂಡಿದೆ.

## 2. ಸಂತೃಪ್ತಿಯ ಕೈ!

ಕೀರ್ತನೆ 145:16

**ನೀನು ಕೈದೆರೆದು ಎಲ್ಲಾ ಜೀವಿಗಳ ಇಷ್ಟವನ್ನು ನೆರವೇರಿಸುತ್ತೀ.** (ಕೀರ್ತನೆ 145:16)

ದೇವರ ಕೈಗಳು ಸಂತೃಪ್ತಿಯ ಮೂಲವಾಗಿವೆ. ಆತನು ತನ್ನ ಜನರ ಇಷ್ಟಾರ್ಥವನ್ನು ನೆರವೇರಿಸುವುದಕ್ಕೆ ಸಂತೋಷವುಳ್ಳವನಾಗಿದ್ದಾನೆ. ಕೀರ್ತನೆ 145:19 ಈ ರೀತಿಯಾಗಿ ಹೇಳುತ್ತದೆ. **ತನ್ನಲ್ಲಿ ಭಯ ಭಕ್ತಿಯುಳ್ಳವರ ಇಷ್ಟವನ್ನು ನೆರವೇರಿಸುತ್ತಾನೆ.** ಇದರ ಜೊತೆಗೆ, ಕೀರ್ತನೆ 37:4ರಲ್ಲಿ ಆಗ

ಯೆಹೋವನಲ್ಲಿ ಸಂತೋಷಿಸುವಿ ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು. ಅನೇಕ ಸಾರಿ ಈ ವಚನಗಳನ್ನು ಓದುವಾಗ, **ನಮ್ಮ ಹೃದಯದಲ್ಲಿ ಉದ್ಭವಿಸುವ ಪ್ರತಿಯೊಂದು ಆಶೆಯನ್ನು ದೇವರು ಪೂರೈಸಬೇಕೆಂದು ನಾವು ನಿರೀಕ್ಷಿಸುತ್ತೇವೆ.** ಏನೇ ಹಾಗಲಿ, ನಾವು ಪಡೆದು ಕೊಳ್ಳದೇ ಇರುವಾಗ ನಮಗೆ ನಿರಾಶೆ ಯಾಗುತ್ತದೆ. ನಮಗೆ ಬೇಕಾದ್ದು ದೊರಕದೆ ಇರುವಾಗ, ದೇವರು ತನ್ನ ಮಾತನ್ನು ಉಳಿಸಿಕೊಳ್ಳಲಿಲ್ಲವೆಂದು ದೂರುತ್ತೇವೆ.

ಪ್ರೀತಿಯ ಸ್ನೇಹಿತರೇ, ನಾವು ಈ ವಾಕ್ಯವನ್ನು ಓದುವಾಗ, ದೇವರು ನಮ್ಮನ್ನು ಸಂತೃಪ್ತಿಪಡಿಸುತ್ತಾನೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಆದರೆ ಇದು ಯಾರು ಅತನಿಗೆ ಭಯಪಡುತ್ತಾರೋ ಯಾಕೆಂದರೆ ಆತನಿಗೆ ಭಯಪಡುವವರ ಆಸೆಗಳು ಮತ್ತು ಇಚ್ಛೆಗಳು ಆತನ ಸ್ವಂತದೊಂದಿಗೆ ಹೊಂದಿಕೆಯಾಗುತ್ತವೆ. ಇಸ್ರಾಯೇಲ್ಯರನ್ನು ಐಗುಪ್ತದಿಂದ ದೇವರು ನಡೆಸಿದಾಗ ಅವರು ಮಾಂಸವನ್ನು ಇಚ್ಛಿಪಟ್ಟರು. ಅವರ ಆಹಾರದ ಆದ್ಯತೆಗಳಲ್ಲಿ ಅವರು ನನ್ನನ್ನು ಹೋಲುತ್ತಾರೆ ಎಂದು ನಾನು ನಂಬುತ್ತೇನೆ. ನಾನು ಮಾಂಸ ಅಹಾರವನ್ನು ಇಷ್ಟಪಡುತ್ತೇನೆ. ಅದಿಲ್ಲದೇ ಊಟ ಮಾಡುವುದು ನನಗೆ ಸವಾಲಾಗಿದೆ. ಇಸ್ರಾಯೇಲ್ಯರು ಪರಲೋಕದ ಆಹಾರದ ಬಗ್ಗೆ ಅತೃಪ್ತಿ ಹೊಂದಿದ್ದರೂ ದೇವರು ಅವರ ಆಸೆಗಳನ್ನು ಪೂರೈಸಿದನು. ಅಂತೆಯೇ ದೇವರು ಸಾಧ್ಯವಿರುವ ಎಲ್ಲ ರೀತಿಯಲ್ಲಿಯೂ ನಮ್ಮನ್ನು ತೃಪ್ತಿಪಡಿಸಲು ಇಷ್ಟಪಡುತ್ತಾನೆ. ಆದರೆ ಈ ತೃಪ್ತಿಯು ಆತನಲ್ಲಿ ಭಯಪಡುವ ಮತ್ತು ಸಂತೋಷಪಡುವವರಿಗೆ ಮತ್ತು ದೇವರಿಗೆ ತಮ್ಮ ಮಾರ್ಗಗಳನ್ನು ಒಪ್ಪಿಸುವವರಿಗೆ ಮೀಸಲಾಗಿದೆ. ಯಾಕೆಂದರೆ ಅವರ ಆಲೋಚನೆಗಳಲ್ಲಿ ಐಕ್ಯತೆ ಇದೆ. ದೇವರಿಗೆ ಭಯಪಡುವ ವ್ಯಕ್ತಿಯು ಯಾವಾಗಲೂ ದೇವರ ಮನಸ್ಸು ಮತ್ತು ಹೃದಯವನ್ನು ಗ್ರಹಿಸುತ್ತಾನೆ. ನಿಮ್ಮ ಸ್ಥಿತಿಯಿಂದ ನೀವು ತೃಪ್ತರಾಗಿದ್ದರೆ ನಿಮ್ಮ ಜೀವನದಲ್ಲಿ ಶಕ್ತಿಯುತವಾದ ದೇವರ ತೃಪ್ತಿಕರ ಹಸ್ತವನ್ನು ನೀವು ನೋಡುತ್ತೀರಿ.

## 3. ಎತ್ತಿ ಹಿಡಿಯುವ ಕೈಗಳು

### ಯಾವುದೇ ಭಯವಿಲ್ಲ.

**ಸತ್ಪುರುಷನ ಗತಿಸ್ಥಾಪನೆಯು ಯೆಹೋವನಿಂದಲೇ ಆಗಿದೆ. ಆತನು ಅವನ ಪ್ರವರ್ತನೆಯನ್ನು ಮೆಚ್ಚುತ್ತಾನೆ. ಅವನು ಕೆಳಗೆ ಬಿದ್ದರೂ ಏಳದೆ ಹೋಗುವುದಿಲ್ಲ. ಯೆಹೋವನು ಅವನನ್ನು ಕೈಹಿಡಿದು ಉದ್ಧಾರ ಮಾಡುವನು** (ಕೀರ್ತನೆ 37:23-24).

ನೀತಿವಂತರು ಎಡವಿ ಬೀಳುವಾಗ ದೇವರ ಹಸ್ತವು ಅವರನ್ನು ಎತ್ತಿಹಿಡಿಯುತ್ತದೆ. **ನೀನಂತು ಹೆದರಬೇಡ. ನಾನೇ ನಿನ್ನೊಂದಿಗಿದ್ದೇನೆ; ದಿಗ್ಭ್ರಮೆಗೊಳ್ಳದಿರು. ನಾನೇ ನಿನ್ನ ದೇವರು; ನಾನು ನಿನ್ನನ್ನು ಬಲಪಡಿಸುತ್ತೇನೆ; ನನ್ನ ಧರ್ಮದ ಬಲಗೈಯನ್ನು ನಿನಗೆ ಆಧಾರ ಮಾಡುತ್ತೇನೆ. ಭಯಪಡಬೇಡ, ನಾನೇ ನಿನಗೆ ಸಹಾಯ ಮಾಡುತ್ತೇನೆ ಎಂದು ನಿನಗೆ ಹೇಳುವ ನಿನ್ನ ದೇವರಾದ ಯೆಹೋವನೆಂಬ ನಾನೇ ನಿನ್ನ ಕೈಹಿಡಿಯುತ್ತೇನಲ್ಲಾ.** (ಯೆಶಾಯ 41:10,13).

ಭಾರತದ ದಕ್ಷಿಣಭಾಗದ ನಾಗರಕೊಯಿಲಿಗೆ ನಾನು ಯೌವ್ವನಸ್ಥನಾಗಿದ್ದಾಗ ನನ್ನ ತಂದೆಯೊಂದಿಗೆ ಸೇವೆಯ ನಿಮಿತ್ತವಾಗಿ ಹೋದ ಸಮಯವನ್ನು ಜ್ಞಾಪಿಸಿಕೊಳ್ಳುವಾಗ, ನಮ್ಮ ಮನೆಗೆ ಹಿಂದಿರುಗುವಾಗ, ನಾವು ಸುಮಾರು 600 ಕಿ.ಮೀ. ಕ್ರಮಿಸಿ ಸಮುದ್ರ ಅಥವಾ ನದಿಯ ಮೇಲಿನ ಸೇತುವೆಯನ್ನು ದಾಟಬೇಕಿತ್ತು. (ನನಗೆ ಯಾವುದೇ ಅಂತಹ ನಿಶ್ಚಯವಿಲ್ಲ). ಆಗ ತುಂಬಾ ಮಳೆ ಬರುತ್ತಿತ್ತು. ಗುಡುಗು ಮತ್ತು ಮಿಂಚು ಇತ್ತು. ಬಸ್ಸ್ ಆ ಸೇತುವೆಯನ್ನು ದಾಟುವಾಗ, ನೀರಿನ ಅಲೆಗಳು ಅತಿವೇಗವಾಗಿ ಮೇಲೆ ಬರುವುದನ್ನು ನಾನು ಅನುಭವಿಸಿದೆನು. ನನಗೆ ಬಹಳ ಭಯವಾಗುತ್ತಿತ್ತು. ನಂತರ ಒಂದು ಬೆಚ್ಚಗಿನ ಕೈಯು ನನ್ನನ್ನು ಹಿಡಿದು ಕೊಂಡಿರುವುದನ್ನು ನಾನು ಅನುಭವಿಸಿದೆನು. ಅದು ನನ್ನ ತಂದೆಯಾಗಿದ್ದನು. ಅದು ನನಗೆ ಸಾಕಾಯಿತು. ಆತನ ಹಿಡಿಯುವಿಕೆಯು ನನ್ನನ್ನು ಈ ರೀತಿಯಾಗಿ ಹೇಳುವಂತೆ ಅನಿಸಿತು. ಭಯಪಡಬೇಡ, ನಾನು ನಿನ್ನ ಸಂಗಡ ಇದ್ದೇನೆ. ನಿನ್ನನ್ನು ಯಾವುದು ಮುಟ್ಟುವುದಕ್ಕೆ ಸಾಧ್ಯವಿಲ್ಲ. ಆ ಮಾತುಗಳನ್ನು ನನ್ನ ತಂದೆಯು ಹೇಳಲಿಲ್ಲ. ಆದರೆ ಆತನ ಹಿಡಿಯುವಿಕೆಯು ನನಗೆ ಸುರಕ್ಷತೆಯ ಅನುಭವವನ್ನು ಕೊಟ್ಟಿತು. ನನಗೆ ಯಾವುದೇ ಭಯವಾಗಲಿಲ್ಲ.

ಪ್ರೀತಿಯ ಸ್ನೇಹಿತರೇ, ನಾನು ಈ ವಚನವನ್ನು ಓದಿದಾಗ, ಕರ್ತನು ನಮ್ಮನ್ನು ತನ್ನ ಕೈಯಿಂದ ಎತ್ತಿಹಿಡಿಯುತ್ತಾನೆ. ದೇವರು ತನ್ನ ಶಕ್ತಿಯುತವಾದ ಕೈಗಳಿಂದ ನಿಮ್ಮನ್ನು ಮತ್ತು ನನ್ನನ್ನು ಎತ್ತಿ ಹಿಡಿದಾಗ, ನಾವು ಚಿಂತಿಸಬೇಕಾಗಿಲ್ಲ ಎಂದು ನಾನು ನೆನಪಿಸಿಕೊಳ್ಳುತ್ತೇನೆ. ನಮ್ಮ ಕೈಗಳನ್ನು ಯಾರು ಹಿಡಿದಿದ್ದಾರೆಂದು ತಿಳಿಯುವಲ್ಲಿ ನಾವು ಖಚಿತವಾಗಿರೋಣ. ಎಲ್ಲಾ ತಿಳುವಳಿಕೆಯನ್ನು ಮೀರಿದ ಶಾಂತಿ ಇರುತ್ತದೆ. ಆ ಶಾಂತಿಯನ್ನು ಪೌಲ ಮತ್ತು ಸೀಲರು ಅನುಭವಿಸಿದರು. ಇದು ಅವರ ಕೈ ಮತ್ತು ಕಾಲುಗಳನ್ನು ಸರಪಳಿಯಿಂದ ಬಂಧಿಸಿ, ಹೊಡೆದು ಮತ್ತು ನಿಂದೆಗೊಳಗಾದ ಅನಿವಾರ್ಯಕ್ಕಾಗಿ ಕಾಯುತ್ತಾ ಹಾಡುವಂತೆ ಮಾಡಿತು. ಇಬ್ರಿಯ ಸಹೋದರರು ಬೆಂಕಿಯ ಮೂಲಕ ನಡೆದಾಗ ಅನುಭವಿಸಿದ ಅದೇ ಶಾಂತಿ. ನಮ್ಮ ಕೈಗಳು ದೇವರ ಕೈಗಳನ್ನು ಹಿಡಿದಿರುವವರೆಗೂ, ನಾವು ಎಲ್ಲಿ ಬೇಕಾದರೂ ನಡೆಯಬಹುದು. ಕೀರ್ತನೆಗಾರನು ಈ ರೀತಿಯಾಗಿ ಹೇಳುತ್ತಾನೆ – **ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ನೀನು ಹತ್ತಿರ**

(6ನೇ ಪುಟಕ್ಕೆ)

RESIDENTIAL BIBLE COURSE
NEHEMIAH BIBLE COLLEGE, Chennai.
Medium : Hindi
Registered Candidate for Membership
Asia Theological Association (ATA)
Recognised by International Christian Leaders & Senior Pastors for the past 54 years
Certificate in Ministry
Diploma in Theology
Qualification : 10th Standard & above
Rush for admission!
Contact : The Chairman, Nehemiah Bible College.
10, MOHAMMED ABDULLAH 2ND STREET, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org
★ ONLINE CLASSES ARE AVAILABLE ★

GREAT COMMISSION PARTNERS
ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು



ಹಂಚುವುದು (ಗಲಾತ್ಯ.6:2), ಪ್ರೋತ್ಸಾಹಿಸುವುದು (ರೋಮಾಪುರ.12:13 )
ತ್ವರಿತಗೊಳಿಸುವುದು ( II ತಿಮೋಥಿ. 1:6 )

**19 ಜನವರಿ 2024 ರಿಂದ 18 ಫೆಬ್ರುವರಿ 2024 ರ ವರೆಗೆ**

**(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)**

## ಸ್ತೋತ್ರಕ್ಕಾಗಿ ಅಂಶಗಳು

ಫೆಬ್ರವರಿ 19 : ನಮ್ಮ ಪ್ರಾರ್ಥನಾ ಪಾಲುಗಾರರು, ಚಂದಾ ಪಾಲುಗಾರರು, ನಂಬಿಕೆಯ ಪಾಲುಗಾರರು, ಜೀವನ ಪಾಲುಗಾರರು, ದೊಡ್ಡ ಆಜ್ಞೆಯ ಪಾಲುಗಾರರು ಮತ್ತು ಅವರ ಕುಟುಂಬಗಳ ಮೇಲೆ ದೇವರ ದಯೆಗಾಗಿ ಆತನಿಗೆ ಸ್ತೋತ್ರವಾಗಲಿ.

ಫೆಬ್ರವರಿ 20 : ಆತನ **ಕರೆಯ ಪ್ರತಿಧ್ವನಿಯ ಯೂಟುಬ್ ಚಾನೆಲ್** ಅನೇಕ ವಿಧವಾದ ತಲುಪದೇ ಇರುವ ಜನರನ್ನು ತಲುಪಿದ್ದಕ್ಕಾಗಿ ಅತನಿಗೆ ಸ್ತೋತ್ರವಾಗಲಿ.

ಫೆಬ್ರವರಿ 21 : ಆತನ **ಕರೆಯ ಪ್ರತಿಧ್ವನಿ**ಯ ಎಲ್ಲಾ ಸಹ ಸಂಪಾದಕರು ಮತ್ತು ಅವರ ಕುಟುಂಬಗಳಿಗಾಗಿ ಕರ್ತನಿಗೆ ಸ್ತೋತ್ರವಾಗಲಿ.

ಫೆಬ್ರವರಿ 22 : ನಮ್ಮ ಎಲ್ಲಾ ಕೆಲಸಗಾರರ ಮೇಲೆ ಆತನ ಹೇರಳವಾದ ಆಶೀರ್ವಾದಕ್ಕಾಗಿ.

ಫೆಬ್ರವರಿ 23 : ನಮ್ಮ 16 ಭಾಷೆಗಳ ಮಾಸಪತ್ರಿಕೆಯ ಆತನ ಆಶೀರ್ವಾದ, ನಮ್ಮ ಮುದ್ರಣಾಲಯದಲ್ಲಿ ಮುದ್ರಿಸಿ, ಸೇವಾಕ್ಷೇತ್ರಗಳಿಗೆ ಕಳುಹಿಸುವುದು.

ಫೆಬ್ರವರಿ 24 : ನಮ್ಮ ಸತ್ಯವೇದ ದೂರಶಿಕ್ಷಣ ಕೋರ್ಸ್ ಮತ್ತು ದೈವಶಾಸ್ತ್ರ ಪತ್ರವ್ಯವಹಾರದ ಕೋರ್ಸ್‌ಗಳ ಬೆಳವಣಿಗೆಗಾಗಿ.

ಫೆಬ್ರವರಿ 25 : ನಮ್ಮ ಮುಖ್ಯ ಸಭೆ ಮತ್ತು ಶಾಖಸಭೆಗಳಲ್ಲಿ ಭಾನುವಾರದ ಆರಾಧನೆಗಳಲ್ಲಿ ದೇವರ ವಾಕ್ಯದ ಶಕ್ತಿಗಾಗಿ ದೇವರಿಗೆ ಸ್ತೋತ್ರವಾಗಲಿ.

ಫೆಬ್ರವರಿ 26 : ನಮ್ಮ ಪಾಲುಗಾರರರಿಂದ ಹಣಕಾಸಿನ ಸಹಾಯ ಮತ್ತು ನೈತಿಕ ಸಹಾಯಕ್ಕಾಗಿ ದೇವರಿಗೆ ಸ್ತೋತ್ರವಾಗಲಿ.

ಫೆಬ್ರವರಿ 27 : ಎಲ್ಲಾ ದುಷ್ಟಶಕ್ತಿಗಳಿಂದ ನಮ್ಮ ಹಿರಿಯ ಸಭಾಪಾಲಕರನ್ನು ಮತ್ತು ಅವರ ಕುಟುಂಬವನ್ನು ಸಂರಕ್ಷಣೆ ಮಾಡಿದ್ದಕ್ಕಾಗಿ ಸ್ತೋತ್ರವಾಗಲಿ.

ಫೆಬ್ರವರಿ 28 : ಸಂತ ಪೌಲ ಮೆಟ್ರಿಕ್ಯುಲೇಷನ್ ಶಾಲೆ, **ನೆಹಮೀಯ ಸತ್ಯವೇದ ಕಾಲೇಜ್** ಮತ್ತು **ದೈವಶಾಸ್ತ್ರದ ದೂರಶಿಕ್ಷಣ ಕೋರ್ಸ್**ಗಳ ಎಲ್ಲಾ ಚಟುವಟಿಕೆಗಳಿಗಾಗಿ

ಫೆಬ್ರವರಿ 29 : ಕಳೆದ ತಿಂಗಳಲ್ಲಿ ನಮ್ಮ ಅಗತ್ಯತೆಗಳನ್ನು ಮತ್ತು ಅತ್ಮೀಕ ಅಗತ್ಯತೆಗಳನ್ನು ಪೂರೈಸಿದಕ್ಕಾಗಿ.

ಮಾರ್ಚ್ 01 : ನಮ್ಮ ಆತನ **ಕರೆಯ ಪ್ರತಿಧ್ವನಿಯ ಸೇವೆ**ಯ ಎಲ್ಲಾ ಸಿಬ್ಬಂದಿ ವರ್ಗದವರು ಮತ್ತು ಅವರ ಕುಟುಂಬಗಳ ಅರೋಗ್ಯಕ್ಕಾಗಿ ಹಾಗೂ ದೈವತ್ವದ ಸಂರಕ್ಷಣೆಗಾಗಿ.

ಮಾರ್ಚ್ 02 : ನಮ್ಮ ಎಲ್ಲಾ ಸಭೆಯ ಚಟುವಟಿಕೆಗಳಲ್ಲಿ ಭಾಗವಹಿಸಲು ಉತ್ಸಾಹದಿಂದ ಯುವಕರನ್ನು ಆಶೀರ್ವದಿಸಿದ್ದಾನೆ.

ಮಾರ್ಚ್ 03 : **ಸಂತ ಮೆಟ್ರಿಕ್ಯುಲೇಷನ್ ಶಾಲೆ** ಮುಖ್ಯೋಪಾಧ್ಯಾಯರಿಗೆ ಮತ್ತು ಬೇರೆ ಸಹ ಕೆಲಸಗಾರರ ಮೇಲೆ ಆತನು

## ಪ್ರಾರ್ಥನೆಗಾಗಿ ಅಂಶಗಳು

ಮಾರ್ಚ್ 04 : ಎಲ್ಲಾ ದೇಶಗಳಲ್ಲಿ ಐಕ್ಯತೆ ಮತ್ತು ಶಾಂತಿಗಾಗಿ.

ಮಾರ್ಚ್ 05 : ನಮ್ಮ ಪಾಲುಗಾರರಿಗೆ ಮತ್ತು ರಾಜ್ಯ ಸಂಯೋಜಕರಿಗಾಗಿ.

ಮಾರ್ಚ್ 06 : ನಮ್ಮ ಭಾರತ ದೇಶದ ಸುವಾರ್ತೆಯು ತಲುಪದೇ ಇರುವ ಸ್ಥಳಗಳಿಗೆ ಸುವಾರ್ತೆಯನ್ನು ತಲುಪಿಸುವಂತೆ.

ಮಾರ್ಚ್ 07 : ನಮ್ಮ ಸೇವಾ ಚಟುವಟಿಕೆಗಳಿಗಾಗಿ.

ಮಾರ್ಚ್ 08 : ನಮ್ಮ ಕರ್ತನು ಈ ತಿಂಗಳ ಎಲ್ಲಾ ಅಗತ್ಯತೆಗಳನ್ನು ಪೂರೈಸುವಂತೆ.

ಮಾರ್ಚ್ 09 : ನಮ್ಮ ಆಂಗ್ಲಭಾಷೆಯ ಸಹ ಸಂಪಾದಕರಾದ ಸಿ. ಸಜನಿ ಚೆರಿಯನ್ ಅವರ ಒಳ್ಳೆಯ ಆರೋಗ್ಯಕ್ಕಾಗಿ.

ಮಾರ್ಚ್ 10 : ಪ್ರಪಂಚದ ಎಲ್ಲಾ ಕಡೆಯಲ್ಲಿ ಕೊರೊನ ವೈರಸ್ ಮತ್ತು ಹೊಸ ವೈರಸ್ ಸಂಪೂರ್ಣವಾಗಿ ನಿರ್ಮೂಲವಾಗುವಂತೆ.

ಮಾರ್ಚ್ 11 : ನಮ್ಮ ದೇಶದಲ್ಲಿರುವ ಎಲ್ಲಾ ಚಿಕ್ಕಮಕ್ಕಳು ಮತ್ತು ಯೌವ್ವನಸ್ಥರು ಯೇಸುಕ್ರಿಸ್ತನನ್ನು ಸ್ವಂತರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವಂತೆ.

ಮಾರ್ಚ್ 12 : ನಮ್ಮ ಹಿರಿಯ ಸಭಾಪಾಲಕರ ಆತ್ಮಚರಿತ್ರೆಯು ಸಫಲವಾಗಿ ಸಂಪೂರ್ಣವಾಗುವಂತೆ.

ಮಾರ್ಚ್ 13 : ವೃದ್ಧಾಶ್ರಮದಲ್ಲಿ ಹಿರಿಯರಿಗಾಗಿ.

ಮಾರ್ಚ್ 14 : ಪ್ರಪಂಚದಲ್ಲಿ ಎಲ್ಲಾ ಯೌವನಸ್ಥರು ಮತ್ತು ಚಿಕ್ಕಮಕ್ಕಳು ಆನ್‌ಲೈನ್ ಆಟಗಳ ವ್ಯಸನದಿಂದ ಬಿಡುಗಡೆಗಾಗಿ.

ಮಾರ್ಚ್ 15 : ನಮ್ಮ ಸಹ ಸಂಪಾದಕರಿಗಾಗಿ ಮತ್ತು ಅವರ ಕುಟುಂಬಗಳಿಗಾಗಿ.

ಮಾರ್ಚ್ 16 : ಎಲ್ಲಾ ದೇಶಗಳ ಮತ್ತು ಅವುಗಳ ಆರ್ಥಿಕ ಬೆಳವಣಿಗೆಗಾಗಿ.

ಮಾರ್ಚ್ 17 : ನಮ್ಮ ಹಿರಿಯ ಸಭಾಪಾಲಕರಾದ ಪಾ. ಸ್ಯಾಮ್ ಸೆಲ್ವರಾಜ ಮತ್ತು ಅವರ ಕುಟುಂಬದವರನ್ನು ಎಲ್ಲಾ ದುಷ್ಟಶಕ್ತಿಯಿಂದ ಸಂರಕ್ಷಿಸುವಂತೆ.

ಮಾರ್ಚ್ 18 : ಪ್ರಪಂಚದಾದ್ಯಂತಹ ಇರುವ ಮಿಶನರಿಗಳ ದೈವತ್ವ ಸಂರಕ್ಷಣೆಗಾಗಿ.

(4ನೇ ಪುಟದಿಂದ)

**ವಿರುವುದರಿಂದ ಕೇಡಿಗೆ ಹೆದರೇನು; ನಿನ್ನ ದೊಣ್ಣೆಯೂ ನಿನ್ನ ಕೋಲೂ ನನಗೆ ಧೈರ್ಯ ಕೊಡುತ್ತದೆ.** (ಕೀರ್ತನೆ 23:4) ಈ ವರ್ಷದ ಉಳಿದ ದಿನಗಳಲ್ಲಿ ನೀವು ಮುಂದುವರಿಯುತ್ತಿರುವಾಗ, ದೇವರು ನಿಮ್ಮ ಕೈ ಹಿಡಿದಿದ್ದಾನೆ ಎಂದು ತಿಳಿದು ಯಾವುದೇ ಪರಿಸ್ಥಿತಿಯನ್ನು ಎದುರಿಸುವ ಶಕ್ತಿಯನ್ನು ನಿಮಗೆ ನೀಡಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಈ ಪಯಣದಲ್ಲಿ ನೀವು ಏಕಾಂಗಿಯಲ್ಲ. ನಿಮ್ಮ ನಿನ್ನೆ ಅಥವಾ ಇಂದು ಮತ್ತು ನಿಮ್ಮ ನಾಳೆಗಳನ್ನು ತಿಳಿದಿರುವ ವ್ಯಕ್ತಿಯನ್ನು ನೀವು ಹೊಂದಿದ್ದೀರಿ. ನಮ್ಮ ನಾಳೆಗೆ ಆತನು ಇರುವುದರಿಂದ ಏನು ಆಗುತ್ತದೆ ಎಂದು ಚಿಂತೆ ಮಾಡುವುದು ಅಗತ್ಯವಿಲ್ಲ. ಆತನು ನನ್ನನ್ನು ತೆಗೆದುಕೊಂಡರೆ ಆತನು ನನ್ನನ್ನು ಹೊರಗಡೆ ತೆಗೆದುಕೊಂಡು ಬರುತ್ತಾನೆ.

## 4. ಸರ್ವಶಕ್ತ ಕೈಗಳು

ಆತನ ಕೈಗಳು ಸರ್ವಶಕ್ತವಾಗಿವೆ. ನಿಮ್ಮ ಪರವಾಗಿ ನಿಂತುಕೊಂಡು ನಿಮಗೆ ಜಯವನ್ನು ಕೊಡುತ್ತಾನೆ. ನಿಮ್ಮ ಪರವಾಗಿ ಹೋರಾಟ ಮಾಡುತ್ತಾನೆ.

ಯೆಶಾಯ 19:16 ಹೇಳುತ್ತದೆ, **ಆ ದಿನದಲ್ಲಿ ಐಗುಪ್ತವು ಹೆಣ್ಣಾಗಿ ಸೇನಾಧೀಶ್ವರನಾದ ಯೆಹೋವನು ತನ್ನ ಮೇಲೆ ಕೈಬೀಸುವುದರಿಂದ ಭಯಪಟ್ಟು ನಡುಗುವುದು.**

ದೇವರ ಕೈಗಳ ವಿರೋಧವಾಗಿ ಯಾರು ನಿಲ್ಲುವುದಕ್ಕೆ ಸಾಧ್ಯವಿಲ್ಲ! ನಿಮ್ಮ ವಿರೋಧವಾಗಿ ಅಲ್ಲವೆಂದು ನಿಶ್ಚಯ ಮಾಡಿಕೊಳ್ಳಿರಿ! ಎಲ್ಲಿಯವರೆಗೆ ದೇವರ ಕೈಗಳು ನಮ್ಮ ಕಡೆಗೆ ಇರುತ್ತವೆಯೋ ಅಲ್ಲಿಯವರೆಗೆ ನಾವು ಸುರಕ್ಷಿತವಾಗಿರುತ್ತೇವೆ. ಆದರೆ ನಮ್ಮ ವಿರೋಧವಾಗಿ ಇದ್ದರೆ, ನಾವು ಏನು ಇಲ್ಲವಾಗುತ್ತೇವೆ.

## ಯಾವಾಗ ದೇವರ ಕೈಗಳು ನಮಗೆ ವಿರೋಧವಾಗಿ ಇರುತ್ತವೆ?

ಅಪೋಸ್ತಲರ ಕೃತ್ಯಗಳು 13:8-11 **ಅವರನ್ನು ವಿರೋಧಿಸಿದ ಮತ್ತು ಧರ್ಮಾಧಿಕಾರಿಯನ್ನು ನಂಬಿಕೆಯಿಂದ ತಿರುಗಿಸಲು ಪ್ರಯತ್ನಿಸಿದ ಎಲುಮನೆಂಬ ಮಾಂತ್ರಿಕನ ಕಥೆಯನ್ನು ಹೇಳುತ್ತದೆ. ಎಲೋ, ಎಲ್ಲಾ ಮೋಸದಿಂದಲೂ ಎಲ್ಲಾ ಕೆಟ್ಟತನದಿಂದಲೂ ತುಂಬಿರುವವನೇ, ಸೈತಾನನ ಮಗನೇ, ಎಲ್ಲಾ ನೀತಿಗೂ ವಿರೋಧಿಯೇ, ನೀನು ಕರ್ತನ ನೀಟಾದ ಮಾರ್ಗಗಳನ್ನು ಡೊಂಕು ಮಾಡುವುದನ್ನು ಬಿಡುವುದಿಲ್ಲವೋ? ಇಗೋ, ಕರ್ತನು ನಿನ್ನ ಮೇಲೆ ಕೈ ಎತ್ತಿದ್ದಾನೆ ಎಂದು ಪೌಲನು ಹೇಳಿದನು.**

ಆತನ ಸರ್ವಶಕ್ತ ಕೈಗಳಿಂದ, ದೇವರು ಸುವಾರ್ತೆಯ ವಿರೋಧಿಗಳಿಗೆ ನ್ಯಾಯ ತೀರಿಸುವನು.

ಕರ್ತನ ಕಾರ್ಯವನ್ನು ನಾವು ವಿರೋಧ ಮಾಡಿದಾಗ, ಕರ್ತನ ಕಾರ್ಯವನ್ನು ನಿಲ್ಲಿಸುವುದಕ್ಕೆ ಮಾತನಾಡುವಾಗ, ದೇವರ ಕೈಗಳು ನಮಗೆ ವಿರೋಧವಾಗಿ ಇರುತ್ತವೆ. ದೇವರ ಮಕ್ಕಳ ವಿರೋಧವಾಗಿ ಮಾತನಾಡಬೇಡಿರಿ. ಸಂದೇಶಗಳನ್ನು ಕಳುಹಿಸುವುದನ್ನು ನಿಲ್ಲಿಸಿ. ಗೊಡ್ಡು ಹರಟೆ ಹೊಡೆಯುವುದನ್ನು ನಿಲ್ಲಿಸಿ. ದೇವರ ಕೆಲಸದ ವಿರುದ್ದವಾಗಿ ಮಾತನಾಡಬೇಡಿರಿ. ದೇವರ ಸೇವಕರ ವಿರೋಧವಾಗಿ ಮಾತನಾಡಬೇಡಿರಿ. ದೇವರು ನೋಡಿಕೊಳ್ಳಲಿ.

ನಮ್ಮಲ್ಲಿ ಕೆಲವರು ಕತ್ತಲೆಯಲ್ಲಿ ಜೀವಿಸುತ್ತಾ ಇದ್ದೇವೆ. ಯಾಕೆಂದರೆ ದೇವರು ಅವರನ್ನು ಕುರುಡರನ್ನಾಗಿ ಮಾಡಿದ್ದಾನೆ. ನಾವು ದೇವರ ಕೆಲಸಕ್ಕೆ ವಿಘ್ನವಾಗಿದ್ದೇವೆ. ಈ ಹೊತ್ತು ನಾವು ಪರೀಕ್ಷಿಸಿ ಕೊಳ್ಳೋಣ, ನಾವು ದಾರಿಗೆ ಮುಚ್ಚಲ್ಪಟ್ಟಿದ್ದರೆ, ಅಡ್ಡಿಯಾಗಿದ್ದರೆ, ನಮ್ಮ ನಡೆ ಮತ್ತು ನುಡಿಗಳು ಆಗಿರಬಹುದು. ಕೆಲವೊಂದನ್ನು ನಾವು ಮಾಡಿದ್ದೇವೆ ಅಥವಾ ಕೆಲವೊಂದನ್ನು ನಾವು ಮಾಡಿಲ್ಲ. ಇವುಗಳು ದೇವರ ಕಾರ್ಯಕ್ಕೆ ಅಡ್ಡಿ ಆಗಿದ್ದಾವೋ? ಹಾಗಾದರೆ ನಾವು ಬಹಳ ಎಚ್ಚರಿಕೆಯಿಂದ ಇರಬೇಕು. ಯಾಕೆಂದರೆ ದೇವರ ಕೈಗಳು ನಮಗೆ ವಿರೋಧವಾಗಿ ಆಗಬಹುದು.

ದೇವರ ಕೈಗಳು ನಿಮ್ಮ ಪರವಾಗಿ ಇದ್ದರೆ, ಅದು ನಮಗೆ ಜಯುವನ್ನು ಕೊಡುತ್ತದೆ. **ಯೆಹೋವನಿಗೆ ಹೊಸ ಕೀರ್ತನೆಯನ್ನು ಹಾಡಿರಿ; ಆತನು ಅದ್ಭುತ ಕೃತ್ಯಗಳನ್ನು ನಡೆಸಿದ್ದಾನೆ. ಆತನ ಬಲಗೈಯೂ ಪರಿಶುದ್ಧ ಬಾಹುವೂ ಜಯವನ್ನು ಉಂಟು ಮಾಡಿವೆ.** ಕೀರ್ತನೆ 98:1

ಪ್ರೀತಿಯ ದೇವರ ಸೇವಕರುಗಳೇ, ಕೆಲವು ಸಾರಿ ಮಾರ್ಗವು ಬಹಳ ಒಂಟಿ, ಉದ್ದ, ಕಷ್ಟಕರವಾಗಿರಬಹುದು. ನೀವು ಕಷ್ಟಪಟ್ಟು ಮಾಡುವ ಕೆಲಸಕ್ಕೆ ಯಾವುದೇ ಅಭಿನಂದನೆಯಿಲ್ಲವೆಂದು ನಿಮಗೆ ಅನಿಸಿರಬಹುದು? ನಿಮ್ಮ ಹಿಂದೆ ಇರುವ ಗಾಯಗಳನ್ನು ಜನರು ನೋಡದೇ ಇರಬಹುದು. ಆದರೆ ಯೇಸು ಇದೇ ಮಾರ್ಗವನ್ನು ಹಾದು ಹೋದನು. ಆತನು ತಿರಸ್ಕರಿಸಲ್ಪಟ್ಟನು, ಅಪಹಾಸ್ಯಗೈದರು, ಪರಿಹಾಸ್ಯ ಮಾಡಿದರು, ನಿರಾಶೆಗೊಳಿಸಿದರು, ಒಂಟಿಗನಾದನು. ನಿಮ್ಮನ್ನು ಕರೆದಾತನು ನಂಬಿಗಸ್ಥನೆಂದು ಯಾವಾಗಲೂ ಜ್ಞಾಪಕದಲ್ಲಿ ಇಟ್ಟುಕೊಳ್ಳಿರಿ! ನಿಮ್ಮ ಬಗ್ಗೆ ಅತನಿಗೆ ಗೊತ್ತು, ಆತನು ನಿಮಗಾಗಿ ಯುದ್ದಮಾಡುವನು. ಸುಮ್ಮನಿರಿ!! ನಮ್ಮ ಎಲ್ಲಾ ಯುದ್ಧಗಳನ್ನು ಮಾಡುವವನು ದೇವರು ನಮಗೆ ಇದ್ದಾನೆ. ಆತನಿಗೆ ಸೋಲು ಎನ್ನುವುದು ಗೊತ್ತಿಲ್ಲ! ಆದ್ದರಿಂದ, ನಾವು ಜಯವನ್ನು ನೋಡುತ್ತೇವೆ. ಯಾಕೆಂದರೆ ನಮ್ಮ ದೇವರು ಬಲವಾದ ಶಕ್ತಿಯುಳ್ಳ ಕೈಗಳಿಂದ ಹೋರಾಟ ಮಾಡುವವನಾಗಿದ್ದಾನೆ.

(9ನೇ ಪುಟಕ್ಕೆ)

NEHEMIAH BIBLE
EVENING COLLEGE
Chepauk & Santhoshapuram, Chennai.
Medium :Tamil
Registered Candidate for Membership
Asia Theological Association (ATA)
ATA NEHEMIAH BIBLE COLLEGE CHENNAI Regd. Candidate for Membership ECHO OF HIS CALL Estd. 1969
Recognised by International Christian Leaders & Senior Pastors for the past 54 years
Certificate in Ministry
Diploma in Theology
Qualification : 10th Standard & above
Rush for admission!
Contact : The Chairman, Nehemiah Bible College.
10, MOHAMMED ABDULLAH 2ND STREET, BELLS ROAD, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org

# PLEASE PRAY FOR OUR MINISTRIES AT THE HEAD QUARTERS

1. Prayer Service : 24 hours
2. **BIBLECOR -** Bible Correspondence Courses : English, Tamil & Hindi
3. **ECHO OF HIS CALL** - Monthly Magazines : English, Tamil, Malayalam, Telugu, Hindi, Kannada, Marathi, Gujarati, Bengali, Odiya, Nepali, Assamese, Punjabi, Urdu, Sinhala & Afrikan.
4. Nehemiah Bible Colleges (Three Centres) (Evening / Residential)
5. Theological Correspondence Courses: English & Tamil
6. Great Commission Partners (Network of Pastors)
7. Training Programmes
8. Crusades
9. Literature Distribution and Follow Up
10. Gospel Printing Press - Publications
11. St. Paul's Matriculation School - Village English High School
12. Sunday Schools : 8.30 a.m. & 4.00 p.m. Sunday
13. **Tamil Services : 8.00 a.m. & 10.00 a.m. Sunday**
14. **Hindi Service : 4.00 p.m. Sunday**
15. **Telugu Service : 5.00 p.m. Sunday**
16. **English & Tamil Service : 6.00 p.m. Sunday**
17. Women's Prayer : 5.30 p.m. Wednesday
18. Men's Prayer : 7.00 p.m. Friday
19. Discipleship Meeting : 6.00 p.m. Saturday
20. House Meetings : 6.30 p.m. Tuesday & Thursday
21. Special Holy Communion : 6.00 a.m. 1st day of each month
22. Ministers Review Meeting : 5.30 p.m. First Saturday
23. Parents' Prayer : 4.00 p.m. First Sunday
24. Night Prayer : 9.30 p.m. Second Friday
25. Fasting Prayer : 9:30 a.m. Third Saturday
26. Holy Communion : Second Sunday Services
27. Youth / Kid Prayer : 10.00 p.m. daily
28. Staff Devotion : 9.00 a.m. daily
29. Office : 9.00 a.m. to 9.00 p.m. (except Sundays)

## Echo of His Call Postal Courses for candidates in India only

### 1. BIBLECOR

We offer Postal Course on Basic Truths of The Bible to new Christians and non-Christians in English – 57 pages, Hindi – 76 pages & Tamil – 96 pages. You will get a course book entitled **New Life – For You!** **After the completion of this course, you will get a certificate. There will be no compulsory fees. You will be blessed!**

### 2. THEOLOGICAL CORRESPONDENCE COURSE

Advanced Distance Education called **Theological Correspondence Course** is available in English – 537 pages and Tamil – 652 pages for Pastors, Evangelists, Christian Leaders and for lay people who have passion to do God's Ministry! A fee of Rs. 1000/- is charged. 7 Books with 149 Chapters are supplied. **Certificate in Ministry** will be awarded. **God will bless you!**

***For more details, write to us.***

**The Chairman, Nehemiah Bible College,**

**Echo of His Call, Post Box 2957**
CHEPAUK, CHENNAI - 600 005.
**Ph.: (044) 2852 8282, 2852 9293, 2854 7766,**
**Cell : 98410 71852, 95661 31858**
**E.mail : biblecor@yahoo.co.in**

## A good opportunity to get Echo of His Call monthly magazine at free of cost

If you could send the addresses of your friends / relatives through post, letter, e.mail, WhatsApp or phone to us, we will dispatch **Echo of His Call** monthly magazine to them at free of cost.

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | |
|---|---|
| **Account Name** | **: ECHO OF HIS CALL EDUCATIONAL TRUST** |
| **Account Number** | **: 1023 2923 805** |
| **Bank Name** | **: STATE BANK OF INDIA** |
| **Branch** | **: TRIPLICANE, CHENNAI - 600 005** |
| **IFSC Code** | **: SBIN 0000249** |
| **SWIFT Code** | **: SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

## (ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರೇ ಅರ್ಥವಾಗಲಿ" (ಮತ್ತಾಯ 24:15)

**ನಿನ್ನ ಕೈಗೆ ಸಿಕ್ಕಿದ ಕೆಲಸವನ್ನೆಲ್ಲಾ ನಿನ್ನ ಪೂರ್ಣಶಕ್ತಿಯಿಂದ ಮಾಡು; ಗಾಳಿಯನ್ನು ನೋಡುತ್ತಲೇ ಇರುವವನು ಬೀಜ ಬಿತ್ತನು; ಮೋಡಗಳನ್ನು ಗಮನಿಸುತ್ತಲೇ ಇರುವವನು ಪೈರು ಕೊಯ್ಯನು.**

**ನಿನ್ನ ಕೈಗೆ ಸಿಕ್ಕಿದ ಕೆಲಸವನ್ನೆಲ್ಲಾ ನಿನ್ನ ಪೂರ್ಣಶಕ್ತಿಯಿಂದ ಮಾಡು; ಗಾಳಿಯನ್ನು ನೋಡುತ್ತಲೇ ಇರುವವನು ಬೀಜ ಬಿತ್ತನು; ಮೋಡಗಳನ್ನು ಗಮನಿಸುತ್ತಲೇ ಇರುವವನು ಪೈರು ಕೊಯ್ಯನು. ಪ್ರಸಂಗಿ 9:10,11:4.**

## YOU SHALL RECEIVE A HUNDREDFOLD, AND SHALL INHERIT EVERLASTING LIFE!

ಸತ್ಯವೇದ ಪತ್ರ ವ್ಯವಹಾರ ಕೋರ್ಸ್‌ಗಳು ಮತ್ತು ಸತ್ಯವೇದ ಕಾಲೇಜಿನ ಮೂಲಕ ಎಲ್ಲಾ ವರ್ಗದ ಜನರಿಗೆ ಸತ್ಯವೇದದ ಆಳವಾದ ಸತ್ಯಗಳನ್ನು ಕಲಿಸುವುದು ನನ್ನ ಬಯಕೆಯಾಗಿತ್ತು. ಈ ಒಂದು ಆಸೆಯು ನನ್ನ ಹೃದಯದಲ್ಲಿ ಆಳವಾಗಿ ಬೇರೂರಿತ್ತು. ಅನೇಕ ವರ್ಷಗಳಿಂದ ಬೆಳೆಯುತ್ತಾ ಪ್ರಕಾಶಿಸಿತು. ಹೇಗಾದರೂ ನಾನು ಆದಾಯದ ಮೂಲವನ್ನು ಹುಡುಕಲು ಅಥವಾ ನನಗೆ ಸೇರಲು ಮತ್ತು ಮಾರ್ಗದರ್ಶನ ನೀಡಲು ಹೆಣಗಾಡುತ್ತಿರುವಾಗ ನಾನು ಅಸಹಾಯಕನಾಗಿದ್ದೆನು. ಈ ಒಂದು ಸಮಯದಲ್ಲಿ ನಾನು ಮತ್ತು ನನ್ನ ಕುಟುಂಬದವರು ಬಡತನಲ್ಲಿ ಜೀವಿಸುತ್ತಾ ಇದ್ದೆವು. ನಮಗೆ ದೊಡ್ಡ ಅಗತ್ಯತೆ ಇತ್ತು. ಯಾವುದೇ ಸೌಲಭ್ಯಗಳು ಇಲ್ಲದ ಒಂದು ಚಿಕ್ಕ ಮನೆ.

1980ರಲ್ಲಿ ಇಂಡಿಯಾ ಬೈಬಲ್ ಲಿಟರೆಚರ್ ಎಂಬ ಸಂಸ್ಥೆಯಿಂದ ಒಂದು ಸುವಾರ್ತೆ ಪಾಕೆಟ್‌ನ್ನು ಸ್ವೀಕರಿಸಿಕೊಂಡೆನು. ಅದನ್ನು ತೆಗೆದು ನೋಡಿದಾಗ, ಅದರಲ್ಲಿ ಕೆಲವು ಸುವಾರ್ತೆ ಕರಪತ್ರಗಳು ಮತ್ತು ಪತ್ರ ವ್ಯವಹಾರದ ಕೋರ್ಸ್‌ಗಳು ಇರುವುದನ್ನು ನಾನು ಕಂಡುಕೊಂಡೆನು. ನಾನು ಈ ಕರಪತ್ರಗಳು ಮತ್ತು ಪತ್ರವ್ಯವಹಾರ ಕೋರ್ಸ್‌ಅನ್ನು ಪರಿಶೀಲಿಸಿದಾಗ, ಭಾರತದಲ್ಲಿ ವಿವಿಧ ಭಾಷೆಗಳಲ್ಲಿ ಜನರನ್ನು ತಲುಪಲು ಒಂದೇ ಕೋರ್ಸ್ ಪುಸ್ತಕವನ್ನು ಬಳಸಲು ನಾನು ಆಸಕ್ತಿಹೊಂದಿದ್ದೇನೆ. ನಾನು ಕೂಡಲೇ ಬೈಬಲ್ ಲಿಟರೇಚರ್ ಕಛೇರಿಗೆ ನನ್ನ ಹಳೆಯ ಸೈಕಲ್‌ನ್ನು ತೆಗೆದುಕೊಂಡು ಚೆನ್ನೈ ಸಾವಿರು ಬೆಳಕಿನಲ್ಲಿರುವ ಕಡೆಗೆ ದಾರಿ ಹಿಡಿದೆ.

ಅಲ್ಲಿ ನಾನು ಒಬ್ಬ ಯೌವ್ವನಸ್ಥನಾದ ವೇಲಾಯುತಂನನ್ನು ಭೇಟಿಯಾದೆನು. ಈಗ ಆತನು ಕಾರ್ಯನಿರ್ವಾಹಕ ನಿರ್ದೇಶಕನಾಗಿದ್ದಾನೆ. ಆತನು ಪತ್ರವ್ಯವಹಾರದ ಪಠ್ಯಪುಸ್ತಕಗಳನ್ನು ನಿಖರವಾಗಿ ಪ್ಯಾಕ್ ಮಾಡಿ ಕಳುಹಿಸುವುದನ್ನು ಗಮನಿಸಿದೆನು. ಅದೇ ರೀತಿಯಾಗಿ ಅತನ ಜೊತೆಗೆ ಮಾಡುವುದಕ್ಕೆ ನನಗೆ ಪ್ರೋತ್ಸಾಹವಾಯಿತು.

ಅವನನ್ನು ಮೆಚ್ಚಿ, ನಾನು ನಿಧಾನವಾಗಿ ಆ ವ್ಯಕ್ತಿಯ ಬಳಿಗೆ ಹೋಗಿ ನನಗೆ ಕೆಲವು ಕೋರ್ಸ್ ಪುಸ್ತಕಗಳನ್ನು ನೀಡಬಹುದೇ ಎಂದು ನಯವಾಗಿ ಕೇಳಿದೆನು. ಪ್ರತಿಯೊಂದು ಪುಸ್ತಕದ ಬೆಲೆಯು 50ಪೈಸೆ ಎಂದು ಆತನು ನನಗೆ ತಿಳಿಸಿದನು. ನಾನು ಆರ್ಥಿಕವಾಗಿ ಹಿಂದುಳಿದ ಕುಟುಂಬದ ವ್ಯಕ್ತಿ ಎಂದು ಹೇಳಿದೆ. ಸಾಧಾರಣ ಮಾಸಿಕ ಸಂಬಳದೊಂದಿಗೆ ಸರ್ಕಾರಿ ಇಲಾಖೆಯಲ್ಲಿ ಉದ್ಯೋಗಿ. ಇದನ್ನು ಕೇಳಿದ ಆತನು 10 ಪುಸ್ತಕಗಳನ್ನು ಉಚಿತವಾಗಿ ದಯೆಯಿಂದ ಕೊಟ್ಟನು. ಏನೇ ಹಾಗಲಿ ತೃಪ್ತಿ ಇಲ್ಲದೆ ತೆಗೆದುಕೊಂಡು ಹೋಗುವ ಕೋಣೆಯೊಳಗಿನ ಪುಸ್ತಕಗಳನ್ನು ಕಿಟಕಿಯ ಮೂಲಕ ಇಣುಕಿ ನೋಡುತ್ತಿದ್ದೆನು. ಅಲ್ಲಿರುವ ಕೆಲವು ಪುಸ್ತಕಗಳು ನನ್ನನ್ನು ಕರೆಯುವಂತೆ ನನಗೆ ಮನಸ್ಸಿನಲ್ಲಿ ಅನಿಸಿತು. ಅವುಗಳು ನಮ್ಮನ್ನು ತೆಗೆದುಕೊಂಡು ಹೋಗು ಎಂಬ ಒತ್ತಾಯಮಾಡುವಂತೆ ನನಗೆ ಆಯಿತು. ನನಗೆ ಗೊತ್ತಿರುವ ಜನರಿಗೆ ಅವರ ಜ್ಞಾನವನ್ನು ಕೊಡುವುದಕ್ಕೆ. ಅವುಗಳಲ್ಲಿ ದೊಡ್ಡ ಸಾಮರ್ಥ್ಯವಿತ್ತು. ಆ ಒಂದು ಜಾಗದಿಂದ ನನಗೆ ಕದಲುವುದಕ್ಕೆ ಆಗಲಿಲ್ಲ. ತಕ್ಷಣ ಇನ್ನೊಬ್ಬ ವ್ಯಕ್ತಿಯು ನನ್ನ ಕಡೆಗೆ ಬಂದು ನೀನು ಯಾರು ಎಂದು ವಿಚಾರಣೆ ಮಾಡಿದರು? ಯಾಕೆ ಇಲ್ಲಿ ತಿರುಗಾಡುತ್ತಾ ಇದ್ದೀಯಾ? ಬಹಳ ಹೊತ್ತಿನ ತನಕ ಕಛೇರಿ ಕಿಟಕಿಯನ್ನು ಇಣಕಿ ನೋಡುತ್ತಾ ಇದ್ದೀಯಾ? ನಾನು ಜೀವಂತ ದೇವರಾದ ಯೇಸುಕ್ರಿಸ್ತನ ಸೇವೆ ಸಲ್ಲಿಸುವುದಕ್ಕಾಗಿ ಬಲವಾದ ಬಯಕೆಯನ್ನು ಹೊಂದಿರುವ ಸೀಮಿತ ಸಾಮರ್ಥ್ಯದ ಮನುಷ್ಯನಾಗಿದ್ದೇನೆ ಮತ್ತು ನಾನು ಕೆಲವು ಪತ್ರವ್ಯವಹಾರ ಕೋರ್ಸ್ ಪುಸ್ತಕಗಳನ್ನು ಖರೀದಿಸಲು ಬಯಸುತ್ತೇನೆ. ಆತನು ನನಗೆ ಹಣವನ್ನು ತೆಗೆದುಕೊಂಡು ಬಂದು ಅವುಗಳನ್ನು ತೆಗೆದುಕೊಂಡು ಹೋಗು ಎಂದು ಸಲಹೆಯನ್ನು ಕೊಟ್ಟನು. ಈ ಒಂದು ಮನಸ್ಸಿನಿಂದ, ನನಗಿರುವ ಒಂದೇ ಒಂದು ಆಸ್ತಿಯಾದ ಸೈಕಲನ್ನು ಮಾರುವುದಕ್ಕೆ ತೀರ್ಮಾನವನ್ನು ಮಾಡಿದೆನು.

ನಾನು ಪ್ರಮಾಣಿಕನಾಗಿ ಹತ್ತಿರವಿರುವ ಸೈಕಲ್ ಶಾಪ್‌ಗೆ ನಡೆದೆನು. ನನ್ನ ಸೈಕಲ್‌ನ್ನು 100 ರೂಪಾಯಿಗಳಿಗೆ ಮಾರಿ 200 ಪತ್ರವ್ಯವಹಾರದ ಕೋರ್ಸ್ ಪುಸ್ತಕಗಳನ್ನು ತೆಗೆದುಕೊಂಡೆನು. ನನ್ನ ಏಕೈಕ ಸಾಧನದಿಂದ ಬೇರ್ಪಟ್ಟ ನಂತರ, ನಾನು ಪುಸ್ತಕಗಳನ್ನು ನನ್ನ ಹೆಗಲ ಮೇಲೆ ಮತ್ತು ತಲೆಯ ಮೇಲೆ ಹೊತ್ತುಕೊಂಡು ನನ್ನ ಮನೆಗೆ ಸಾವಿರ ದೀಪಗಳು ಎಂದು ಕರೆಯಲ್ಪಡುವ ಸ್ಥಳದಿಂದ ಸುಮಾರು 5 ಕಿಲೋಮೀಟರ್ ದೂರದ ನನ್ನ ಮನೆಗೆ ಹೋಗಬೇಕಾಯಿತು. ಇಂತಹ ಭಾರವುಳ್ಳ ವಸ್ತುಗಳನ್ನು ಹೊರುವ ಅನುಭವ ಇಲ್ಲದ ಕಾರಣ, ನನಗೆ ಬೇಗ ಸುಸ್ತಾಯಿತು. ಎರಡು ಕಡೆಗೆ ನನ್ನ ತಲೆಯಿಂದ ಮತ್ತು ಹೆಗಲಿನಿಂದ ರಸ್ತೆಯ ಮೇಲೆ ಬಿತ್ತು. ನನ್ನನ್ನು ಅಸಹಾಯಕನ್ನಾಗಿ ಮಾಡಿತು. ನಾನು ಹೆಣಗಾಡುತ್ತಿರುವಾಗ ಜನರು ನನ್ನನ್ನು ಅಪಹಾಸ್ಯ ಮಾಡುತ್ತಿದ್ದರು. ಅಂತಿಮವಾಗಿ ಮನೆಗೆ ಸೇರಿ ಮತ್ತು ನನ್ನ ಎಲ್ಲಾ ಶಕ್ತಿಯಿಂದ ಪುಸ್ತಕಗಳನ್ನು ವಿತರಣೆ ಮಾಡುವುದಕ್ಕೆ ಪ್ರಾರಂಭಿಸಿದೆನು.

ಸಹೋದರ ಎಂ.ಪೌಲ್‌ರಾಜ್ ಸಹಾಯದಿಂದ ಹೊಸ ಜೀವನ ನಿಮಗಾಗಿ ಪ್ರಾರಂಭಿಸುವಂತೆ ದೇವರು ಶಕ್ತಿಕೊಟ್ಟನು. ಇದರ ಜೊತೆಗೆ ಆತನ ಕರೆಯ ಪತ್ರಧ್ವನಿಯ ಸಾಯಂಕಾಲದ ಸತ್ಯವೇದ ಕಾಲೇಜನ್ನು ನಾವು ಸ್ಥಾಪಿಸಿದೆವು.

ಹೌದು ನನ್ನ ಸ್ನೇಹಿತನೇ, ದೇವರ ರಾಜ್ಯದ ಸಲುವಾಗಿ ನಾನು ನನ್ನ ಹಳೆಯ ಸೈಕಲ್‌ನೊಂದಿಗೆ ಭಾಗವಾಗಬೇಕಾದ ಸಮಯವಿತ್ತು. ಇದು ಅವಮಾನದ ಮೂಲವಾಗಿದೆ ಮತ್ತು ನನ್ನ ಕುಟುಂಬ ಮತ್ತು ಸ್ನೇಹಿತರಿಂದ ಅಜ್ಞಾನ ಮತ್ತು ಮೂರ್ಖತನದ ಕ್ರಿಯೆಯಾಗಿ ನೋಡಲಾಗಿದೆ. ಆದ್ದರಿಂದ ಈ ಹೊತ್ತು ದೇವರು ನನಗೆ ಕಾರುಗಳನ್ನು ಮತ್ತು ಸಾಮರ್ಥ್ಯವುಳ್ಳ ವೈಯಕ್ತಿಕ ಸಹಾಯಕರನ್ನು ಕೊಟ್ಟು ಆಶೀರ್ವದಿಸಿದ್ದಾನೆ.

ಒಂದು ಸಾರಿ, ನನ್ನ ಹೆಗಲ ಮತ್ತು ತಲೆಯ ಮೇಲೆ ಸುವಾರ್ತೆಯ ಪುಸ್ತಕಗಳನ್ನು ವೈಯಕ್ತಿವಾಗಿ ತೆಗೆದುಕೊಂಡು ಹೋಗಬೇಕಾಗಿತ್ತು. ಅದು ನಿಜವಾಗಿ ನೋವಿನ ಮತ್ತು ನನ್ನ ಯೌವ್ವನ ಕಾಲದ ಕೀಳರಿಮೆಯ ಅನುಭವವಾಗಿತ್ತು. ಆದರೆ ಈಗ ದೇವರು ನನಗೆ ವ್ಯಾನ್‌ಗಳನ್ನು ಒದಗಿಸಿದ್ದಾನೆ ಮತ್ತು ಸುವಾರ್ತೆ ಸಾಹಿತ್ಯವನ್ನು ಸರಬರಾಜು ಮಾಡುವುದಕ್ಕೆ ಮತ್ತು ಸಿಬ್ಬಂದಿ ವರ್ಗದವರಿಗಾಗಿ ಮಿನಿ ಬಸ್ಸುಗಳನ್ನು ಒದಗಿಸಿದ್ದಾನೆ.

ಪ್ರೀತಿಯ ಸ್ನೇಹಿತ, ದೇವರಿಂದ ನಿಮಗಾಗಿ ವಿಶೇಷವಾದ ಯೋಜನೆ ಇದೆ ಮತ್ತು ನಿಮ್ಮ ಭವಿಷ್ಯಕ್ಕಾಗಿ ಕೂಡ. ನಿಮಗೆ ಇನ್ನೂ ಸಮಯವಿದೆ. ಯಾವುದೇ ಆಗಲಿ ದೇವರಿಗೆ ಸಮರ್ಪಿಸಿದರೆ ಆತನು ನಿಮಗೆ ಅತ್ಯಧಿಕವಾಗಿ ಬಹುಮಾನವನ್ನು ಕೊಡುತ್ತಾನೆ. ನೀವು ಯೇಸಕ್ರಿಸ್ತನನ್ನು ನಿಮ್ಮ ಸ್ವಂತ ಮಾದರಿಯನ್ನಾಗಿ ತೆಗೆದುಕೊಂಡರೆ, ದೇವರ ರಾಜ್ಯದ ಕೇಂದ್ರಿತ ಮನಸ್ಥಿತಿಯೊಂದಿಗೆ ಸೇವೆಯಲ್ಲಿ ನಿಮಗೆ ಪ್ರಾಮುಖ್ಯತೆಯ ಏನನ್ನಾದರೂ ಹೂಡಿಕೆ ಮಾಡಲು ಆಯ್ಕೆಮಾಡಿ. ನಿಮ್ಮ ಜೀವಿತದಲ್ಲಿ ದೇವರ ಆಶೀರ್ವಾದಗಳಿಗೆ ಎಂದಿಗೂ ಕೊನೆ ಇರುವುದಿಲ್ಲ. ಜ್ಞಾಪಕವಿಟ್ಟುಕೊಳ್ಳಿರಿ.

**ಒಂದೇ ಒಂದು ಜೀವಿತ; ಬೇಗನೆ ನಶಿಸಿ ಹೋಗುವುದು;**
**ಕ್ರಿಸ್ತನಿಗಾಗಿ ಏನು ಮಾಡುತ್ತೀಯೋ ಅದು ಉಳಿಯುತ್ತದೆ!**

★ ★ ★

## Kind Attention: Echo of His Call Readers

Our 5 minute **Echo of His Call** YouTube messages are being broadcasted from 2.00 A.M. in Tamil, Telugu, English and Hindi (everyday). You can receive the Grace of God by watching the messages.

Moreover, save my mobile numbers (+91) 98410 71858, (+91) 98412 71858 (personal) in your mobile phones.

- Pr. S. Sam Selva Raj

*(6ನೇ ಪುಟದಿಂದ)*

## 5. ರೂಪಿಸುವ ಕೈಗಳು!

ಅಂತಿಮವಾಗಿ ದೇವರ ಕೈಗಳು ರೂಪಿಸುವ ಕೈಗಳು ಅಗಿವೆ. ಆತನು ಕುಂಬಾರನು ಮತ್ತು ನಾವು ಜೇಡಿಮಣ್ಣು ಆಗಿದ್ದೇವೆ. ಆತನು ನಮ್ಮನ್ನು ರೂಪಿಸುವವನು ಆಗಿದ್ದಾನೆ. ಕೆಲವೊಮ್ಮೆ ಕತ್ತರಿಸುವ ಮೂಲಕ, ಕೆಲವೊಮ್ಮೆ ಅಂಚುಗಳ ಉದ್ದಕ್ಕೂ ಪರಿಷ್ಕರಿಸುವ ಮೂಲಕ ಮತ್ತು ಕೆಲವೊಮ್ಮೆ ಆತನು ಅಹಿತಕರವಾದ ಕೆಲಸಗಳನ್ನು ಮಾಡಬೇಕಾಗಬಹುದು. ಇದರಿಂದ ನಾನು ನಮ್ಮ ಯಜಮಾನನಿಗೆ ಉಪಯುಕ್ತವಾಗಬಹುದು.

ದೇವರು ನಮ್ಮನ್ನು ರೂಪಿಸುವಾಗ ಅದು ಸುಲಭವಾದ ಅನುಭವವಲ್ಲ. ಇದು ನೋವುಂಟು ಮಾಡುತ್ತದೆ ಮತ್ತು ನಮ್ಮನ್ನು ದುರ್ಬಲಗೊಳಿಸುತ್ತದೆ. ಆದರೆ ಈ ಒಂದು ಸಮಯದಲ್ಲಿ ದೇವರ ಅಗಮ್ಯವಾದ ಜ್ಞಾನಕ್ಕೆ ನಮ್ಮನ್ನು ನಾವು ಸಮರ್ಪಣೆ ಮಾಡಿಕೊಳ್ಳಬೇಕು ಮತ್ತು ಅತನ ಮೇಲೆ ನಂಬಿಕೆ ಇಡಬೇಕು. ದೇವರಿಗೆ ಅತ್ಯುತ್ತಮವಾದದ್ದು ಗೊತ್ತು ಎಂದು ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳುವ ಒಂದು ಸಂಗತಿಯು ಅವಶ್ಯವಾಗಿದೆ.

ದೇವರು ಕೆಲವು ಸನ್ನಿವೇಶಗಳನ್ನು ಮತ್ತು ಸಂದರ್ಭಗಳನ್ನು ನಮ್ಮ ಜೀವಿತದಲ್ಲಿ ಅಪ್ಪಣೆ ಕೊಡುತ್ತಾನೆ. ನಮ್ಮನ್ನು ರೂಪಿಸುವುದಕ್ಕೆ ಜನರಿಗೆ ಅಪ್ಪಣೆ ಕೊಡುತ್ತಾನೆ. ಕೆಲವು ಜನರು ತಮ್ಮ ಮಾತುಗಳ ಮೂಲಕ ಕೀಳಾಗಿ, ಕಿರಿಕಿರಿ ಮತ್ತು ಚುಚ್ಚುವ ಮೂಲಕ ನಮಗೆ ತಾಳ್ಮೆಯನ್ನು ಕಲಿಸಲು ನಮ್ಮ ಜೀವನದಲ್ಲಿ ನಡೆಯುತ್ತಾರೆ. ನಮ್ಮ ಗುಣವನ್ನು ಬೆಳೆಸುವುದಕ್ಕಾಗಿ ದೇವರು ಕೆಲವು ಜನರಿಗೆ ಅಪ್ಪಣೆ ಕೊಡುತ್ತಾನೆ. ನಮ್ಮನ್ನು ಕತ್ತರಿಸುವುದಕ್ಕಾಗಿ ಕೆಲವು ಸನ್ನಿವೇಶದಲ್ಲಿ ಜನರು ಬರುತ್ತಾರೆ. ದೇವರು ನಿಗದಿಪಡಿಸಿದ ಗುರಿಯನ್ನು ನಾವು ಸಾಧಿಸಿದ ತಕ್ಷಣ ಅವರು ಹೊರಟು ಹೋಗುತ್ತಾರೆ. ಕೆಲವು ಸಾರಿ ಜನರು ನಮ್ಮನ್ನು ಬಿಟ್ಟುಹೋದಾಗ ನಾವು ಗೋಳಾಡುತ್ತೇವೆ. ಶಾಶ್ವತ ಗಾಯವನ್ನು ಬಿಟ್ಟುಹೋಗುತ್ತಾರೆ. ನಾನು ಇದನ್ನು ಬಹಳ ಕಷ್ಟಪಟ್ಟು ಕಲಿತುಕೊಂಡಿದ್ದೇನೆ. ನಮ್ಮ ಜೀವಿತದಲ್ಲಿ ಜನರು ಕೆಲವು ಕಾಲಕ್ಕೆ ಮಾತ್ರ ಬರುತ್ತಾರೆ. ಕೆಲವು ಮೊದಲ ಪುಟಕ್ಕೆ ಮಾತ್ರ, ಕೆಲವರು ಮೊದಲ ಪಾಠಕ್ಕೆ ಮಾತ್ರ. ಕೇವಲ ಕೆಲವು ಜನರನ್ನು ಮಾತ್ರ ನಮ್ಮ ಜೀವನದ ಕಥೆಯು ಉದ್ದಕ್ಕೂ ಉದ್ದೇಶಿಸಲಾಗಿದೆ. ಆದ್ದರಿಂದ ಕೆಲವು ಜನರು ನಿಮ್ಮ ಜೀವನದಿಂದ ದೂರ ಹೋಗಲು ದೇವರು ಅನುಮತಿಸಿದಾಗ, ಬಲವಾಗಿರಿ! ಅಲ್ಲಿ ಒಂದು ಕಾರಣವಿದೆ ಎಂದು ದೇವರಿಗೆ ಗೊತ್ತು! ಕೆಲವು ಸಮಯಗಳಲ್ಲಿ ದೇವರ ಕೈಗಳನ್ನು ನಾವು ಅನುಭವಿಸುತ್ತೇವೆ. ನಮ್ಮನ್ನು ನುಚ್ಚುಮಾಡುವುದಕ್ಕೆ. ಆದರೆ ಅದು ನಾಶ ಮಾಡುವುದಕ್ಕೆ ಅಲ್ಲ. ಅದು ರೂಪಿಸುವುದಕ್ಕೆ ಹಾಗಿದೆ.

1 ಪೇತ್ರ 5:6 ಹೇಳುತ್ತದೆ, **ಹೀಗಿರುವುದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು.** ಬನ್ನಿ ನಮ್ಮ ಜೀವಿತದಲ್ಲಿ ದೇವರ ಬಲವಾದ ಕೈಗಳು ಇರುವುದನ್ನು ನಾವು ನೋಡೋಣ.

ನಮ್ಮ ಜೀವಿತದಲ್ಲಿ ಆಸೆಗಳನ್ನು ಸಮರ್ಪಿಸಿದರೆ ಮತ್ತು ದೇವರ ಬಲವಾದ ಕೈಗಳಲ್ಲಿ ಇಟ್ಟರೆ ಆಗ ಮೇಲಿರುವ ಎಲ್ಲಾ ಆಶೀರ್ವಾದಗಳು ನಮ್ಮ ಜೀವಿತದಲ್ಲಿ ಬರುತ್ತೇವೆ.

★ ★ ★

## URGENT

We require approximately 1000 Hindi Christian books for **our Nehemiah Bible Colleges**. Kindly inform us about the possibility of obtaining theological Hindi books.

**Please stop sending books in English and Tamil languages.** Thank you.

- Pr. S. Sam Selva Raj, Editor
+91-98412 71858

## URGENT NEED

**PRINCIPAL & TEACHERS for**

**ST. PAUL'S MATRICULATION SCHOOL,**
**An *Echo of His Call* Institution**
**Vijayanagaram, Medavakkam, Chennai - 100.**

We need well qualified, experienced, dedicated, hard working and mission oriented Christians.

Apply with Bio-data to
E.mail: sam@echoofhiscall.org
WhatsApp: (+91) 98412 71858

## WANTED for

**NEHEMIAH BIBLE COLLEGE**
**of ECHO OF HIS CALL, Chennai**
(ATA - Registered Candidate for Membership)

**DEAN (Residential):**
Hindi Theologian with M.Div. / M.Th. Degree & experience. Boarding, Lodging and Salary will be paid.
Eligible candidates may send bio--data to:
E.mail: sam@echoofhiscall.org
WhatsApp: (+91) 98412 71858

RNI NO. 70107/98, Postal Regn. No. TN/CH (C)/195/24-26 WPP NO. TN/PMG(CCR)/WPP-219/24-26

## Echo of His Call

**YouTube**
Please subscribe

Kindly view and subscribe our **Echo of His Call YouTube Channel** when you get time. Thanks.
**- Editor**

## OUR BANK DETAILS:

### 1. Bank : State Bank of India

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

### 2. Bank : ICICI Bank

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

### 3. Bank : State Bank of India

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

**Google Pay: 98410 71858**
**PayPal : SAM SELVA RAJ**
*****
E.mail : sam@echoofhiscall.org

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

Annual Subscription : Rs. 100/- Life Subscription : Rs. 2000/-

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.com

**YOU CAN SEND YOUR DONATION ONLINE ALSO**

RNI NO. 70107/98
**Postal Regn. No. TN/CH/(C)/195/24-26**
**WPP NO. TN/PMG(CCR)/WPP- 219/24-26**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 10th FEBRUARY 2024**
**If un-delivered please return to:**
**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

**To**

*GOD BLESS YOU!*

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**